ಆರ್‌ಬಿಐ.೨೦೦೬-೨೦೭/೩೧೦
ಡಿಬಿಓಡಿ.ಸಂಖ್ಯೆ.ಲೆಗ್ ಬಿಸಿ.೭೫/೦೯.೦೭.೦೦೫/೨೦೦೬-೦೭

ಏಪ್ರಿಲ್ ೦೫, ೨೦೦೭

ಎಲ್ಲ ಅನುಸೂಚಿತ ವಾಣಿಜ್ಯ ಬ್ಯಾಂಕುಗಳಿಗೆ
(ಗ್ರಾಮೀಣ ಬ್ಯಾಂಕುಗಳನ್ನು ಹೊರತುಪಡಿಸಿ)

ಮಾನ್ಯರೇ

ಏಕ- ಠೇವಣಿದಾರ ಖಾತೆಗಳಲ್ಲಿ ನಾಮ-ನಿರ್ದೇಶನ ಸೌಲಭ್ಯ

ಜೂನ್ ೦೯, ೨೦೦೫ ರ ಮೇಲ್ಕಾಣಿಸಿದ ವಿಷಯದ ಬಗ್ಗೆ ನಮ್ಮ ಸುತ್ತೋಲೆ ಡಿಬಿಓಡಿ.ಸಂಖ್ಯೆ. ಬಿಸಿ.೯೫/ ೦೯.೦೭.೦೦೫/೨೦೦೪-೦೫ ನ್ನು ದಯವಿಟ್ಟು ಗಮನಿಸಿ. ಠೇವಣಿಖಾತೆದಾರರಿಗೆ ಲಭ್ಯವಿರುವ ಉತ್ತರಜೀವಿತಾಧಿಕಾರದ ಖಂಡ [Clause] ಹಾಗೂ ನಾಮ-ನಿರ್ದೇಶನ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ಮತ್ತು ಸೂಕ್ತ ಮಾರ್ಗದರ್ಶನ ನೀಡಲು ಬ್ಯಾಂಕುಗಳಿಗೆ ಆದೇಶಿಸಲಾಗಿತ್ತು. ಈ ದಿಸೆಯಲ್ಲಿನ ಉತ್ತಮ ಪ್ರಯತ್ನಗಳ ಹೊರತಾಗಿಯೂ, ಬ್ಯಾಂಕುಗಳು ನಾಮ-ನಿರ್ದೇಶನವಿಲ್ಲದ ಏಕ- ಠೇವಣಿದಾರ ಖಾತೆಗಳನ್ನು ತೆರೆಯಬಹುದೆಂದು ನಮಗೆ ಅನಿಸುತ್ತದೆ.

೨. ಅಲಹಾಬಾದ್ ಹೈಕೋರ್ಟ್ ನ ಮುಂದೆ ಬಂದ ಒಂದು ಪ್ರಕರಣದಲ್ಲಿ ಘನತೆವೆತ್ತ ನ್ಯಾಯಾಲಯ ಹೀಗೆ ಅಭಿಪ್ರಾಯ ಪಟ್ಟಿದೆ: ``ಠೇವಣಿದಾರರು ನಾಮ-ನಿರ್ದೇಶನಗೊಂಡವರ ಹೆಸರನ್ನು ನೀಡದಿದ್ದಲ್ಲಿ ಉಳಿತಾಯ ಖಾತೆಯಲ್ಲಾಗಲೀ, ನಿಶ್ಚಿತ ಠೇವಣಿಯ ಖಾತೆಯಲ್ಲಾಗಲೀ ಅಂತಹ ಏಕ- ಠೇವಣಿದಾರ ಖಾತೆಯನ್ನು ತೆರೆಯಬಾರದೆಂಬ ಮಾರ್ಗಸೂಚಿಗಳನ್ನು ರಿಸರ್ವ್ ಬ್ಯಾಂಕ್ ನೀಡುವುದು ಅತ್ಯಂತ ಉಚಿತವಾಗಿರುತ್ತದೆ. ಕಾನೂನು ಸಮ್ಮತವಾಗಿ ಸೇರಬೇಕಾದ ಹಣವನ್ನು ಪಡೆಯಲು ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಉಂಟಾಗಬಹುದಾದ ದೀರ್ಘ ಕಾಲದ ವಿಳಂಬದ ಅನಾನುಕೂಲತೆಯನ್ನು ನಿವಾರಿಸಿ ಅಮಾಯಕ ವಿಧವೆಯರಿಗೆ ಹಾಗೂ ಮಕ್ಕಳಿಗೆ ಸೂಕ್ತ ನ್ಯಾಯ ದೊರಕಿಸಿಕೊಡುವಲ್ಲಿ ಈ ಮಾರ್ಗದರ್ಶನಗಳು ಮುಖ್ಯ ಪಾತ್ರ ವಹಿಸುತ್ತವೆ.

೩. ಇದನ್ನು ಗಮನದಲ್ಲಿರಿಸಿಕೊಂಡು ಠೇವಣಿ ಖಾತೆಯನ್ನು ತೆರೆಯುವ ವ್ಯಕ್ತಿಯು ಸಾಮಾನ್ಯವಾಗಿ ನಾಮ-ನಿರ್ದೇಶನ ಮೊದಲೇಬೇಕೆಂದು ಒತ್ತಾಯಿಸಲು ಬ್ಯಾಂಕುಗಳಿಗೆ ಆದೇಶಿಸಲಾಗಿದೆ. ಒಂದು ವೇಳೆ ಖಾತೆ ತೆರೆಯುವ ವ್ಯಕ್ತಿಯು ನಾಮ-ನಿರ್ದೇಶನವನ್ನು ಮಾಡದಿದ್ದಲ್ಲಿ ಬ್ಯಾಂಕು ನಾಮ-ನಿರ್ದೇಶನ ಸೌಲಭ್ಯದ ಅನುಕೂಲತೆಗಳನ್ನು ವಿವರಿಸಬೇಕು. ಇಷ್ಟಾಗಿಯು ಖಾತೆ ತೆರೆಯುವ ವ್ಯಕ್ತಿ ನಾಮ-ನಿರ್ದೇಶನ ಮಾಡಲು ಇಚ್ಚಿಸದಿದ್ದಲ್ಲಿ, ಬ್ಯಾಂಕು ಅಂತಹ ವ್ಯಕ್ತಿಯಿಂದ ತಾನು ನಾಮ-ನಿರ್ದೇಶನ ಮಾಡಲು ಇಚ್ಚಿಸುವುದಿಲ್ಲವೆಂಬುದರ ಬಗ್ಗೆ ನಿರ್ದಿಷ್ಟ ಪತ್ರ ಪಡೆಯತಕ್ಕದ್ದು. ಒಂದು ವೇಳೆ ಖಾತೆ ತೆರೆಯುವ ವ್ಯಕ್ತಿ ಅಂತಹ ಪತ್ರ ನೀಡಲು ನಿರಾಕರಿಸಿದಲ್ಲಿ ಬ್ಯಾಂಕು ಈ ವಿಷಯವನ್ನು ಖಾತೆ ತೆರೆಯುವ ನಮೂನೆಯ ಮೇಲೆ ದಾಖಲಿಸಿ, ಮಿಕ್ಕ ವಿವರಗಳು ಅರ್ಹವಾಗಿದ್ದಲ್ಲಿ ಖಾತೆ ತೆರೆಯುವ ಪ್ರಕ್ರಿಯೆಯನ್ನು ಮುಂದುವರಿಸಬಹುದು. ಯಾವುದೇ ಸಂದರ್ಭದಲ್ಲಿ ಖಾತೆ ತೆರೆಯುವ ವ್ಯಕ್ತಿಯು ನಾಮನಿರ್ದೇಶನ ಮಾಡಲು ನಿರಾಕರಿಸಿದನೆಂಬ ಒಂದೇ ಕಾರಣಕ್ಕಾಗಿ ಬ್ಯಾಂಕು ಖಾತೆ ತೆರೆಯಲು ನಿರಾಕರಿಸಕೂಡದು.

೪. ಮುಂದುವರಿದಂತೆ, ಬ್ಯಾಂಕುಗಳು ನಮ್ಮ ಸುತ್ತೋಲೆ ಡಿ.ಬಿ.ಓ.ಡಿ ಸಂಖ್ಯೆ ಬಿಸಿ/೦೯.೦೮.೦೦೪/೯೬-೯೭ ದಿನಾಂಕ ೨೮-೨-೧೯೯೭ ಯನ್ನು ಗಮನಿಸಬಹುದು. ಇದರಲ್ಲಿ ಏಕ-ಮಾಲಿಕತ್ವ ಸಂಸ್ಥೆಯ ಹೆಸರಿನಲ್ಲಿ ಇರುವ ಠೇವಣಿಗಳಿಗೂ ನಾಮ ನಿರ್ದೇಶನ ಸೌಲಭ್ಯವನ್ನು ವಿಸ್ತರಿಸಬಹುದೆಂದು ಆದೇಶಿಸಲಾಗಿದೆ. ಏಕ-ಮಾಲಿಕತ್ವ ಸಂಸ್ಥೆಯ ಹೆಸರಿನಲ್ಲಿರುವ ಠೇವಣಿ ಖಾತೆಗಳಿಗೂ ಸಹ ಮೇಲೆ ಉಲ್ಲೇಖಿಸಿದ ಕ್ರಮಗಳನ್ನೇ ಅನುಸರಿಸಬೇಕೆಂದು ಬ್ಯಾಂಕುಗಳಿಗೆ ಆದೇಶಿಸಲಾಗಿದೆ.

ತಮ್ಮ ವಿಶ್ವಾಸಿ

(ಪ್ರಶಾಂತ್ ಸರನ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು (ಪ್ರಭಾರಿ)